ಈಗ ವಿಚಾರ ಮಾಡುವಾಗ ಬಂತು. ಶಿವಗೀತಳನ್ನ ನೀನು ಸೊಸೆ ಅಂತ ತಂದಿ. ಆಕೆಗೆ ವಿಧಿ ಬೆನ್ನತ್ತಿ ಹಾಳು ಮಾಡ್ತು. ಈಗ ಮನ್ಯಾಗಾಳ. ನೀನು ಆಕೆಯನ್ನ ಮಗಳಂತ ನಿಜವಾಗಿ ತಿಳಿ. ನಿನ್ನ ಮಗಳಿಗೆ ಹಿಂಗಾಯ್ತು ಅಂದ್ರ, ಆದೀಶ ಬಂದು ಕೇಳಿದಾಗ ‘ಇಲ್ಲ’ ಅನ್ನಕ ಬರ್ತಿತ್ತೇನು? ತಂದೆಯಾಗಿ ‘ಆಗ್ಲಿ’ ಅಂತನೇ ಹೇಳ್ತಿದ್ದಿ ಅಂತ ನನಗನಸ್ತದ. ಬಸವಣ್ಣ ಹೇಳಿದಂಗ ನಿನ್ನಲ್ಲಿ ದಯೇ, ಕರುಣೆ ನೆಲೆ ನಿಂತಾದ...’

‘ತಾತ, ನಾನು ಒಪ್ಪತೀನಿ! ಮದುವೆ ಮುಂದ ಸಮಸ್ಯೆಗಳು ಎದ್ದು ನಿಲ್ತಾವ! ಶಿವಗೀತಳ ಮಗ ಈಗ ನಮ್ಮ ಮರುಳಶಂಕರನೇ ಆಗಿ ನಿಂತಾನ. ಮಗನನ್ನ ಬಿಟ್ಟು ಆದೀಶನ ಜತೆಗೆ ಹೋಗಿ ಇರ್ತಾಳೇನು ಶಿವಗೀತ? ಗಂಡನ ಮನೆಯವರು ಮರುಳಶಂಕರನ ಮಗನನ್ನು ಸಹಿಸುತ್ತಾರೇನು? ಮೊಮ್ಮಗನ ಪ್ರಶ್ನೆ ಬರ್ತದ’ ಶಿವಸಂಗಪ್ಪನ ವಿಚಾರಗಳು ದಿಟವಾಗಿಯೇ ಕಂಡವು. ತಾತನಿಗೆ ಮರುಳಶಂಕರ ಮಗನ ಪ್ರಶ್ನೆ ಇರಲಿಲ್ಲ ಅಂತಲ್ಲ. ಮದುವೆ ಬಗ್ಗೆ ಚಿಂತಿಸಿದಷ್ಟು ಮಗುವಿನ ಭವಿಷ್ಯದ ಬಗ್ಗೆ ಹೆಚ್ಚು ಚಿಂತಿಸಿರಲಿಲ್ಲ. ಈಗ ಅದಕ್ಕೊಂದು ದಾರಿ ಹುಡುಕುವ ಯತ್ನ ಒಳಗೆ ನಡೆಯಿತು.

‘ಇದೇ ದೊಡ್ಡಮನ್ಯಾಗ ಅವನಿರ್ಬೇಕು ಸಂಗಪ್ಪ!’ ಎಂದು ತಾತ ಹೇಳಿದ್ದು ಕೇಳಿ, ‘ತಾತ, ನೀನು ನನ್ನ ಕೈಬಿಟ್ಟಿಲ್ಲ ಅದೇ ಸಾಕು! ಶಿವಗೀತಳ ಮದುವಿಗೆ ನನ್ನ ಒಪ್ಪಿಗೆ ಐತಿ! ಮನೆಮಂದಿನ್ನ ಒಪ್ಪಿಸತೀನಿ. ಮಲ್ಲಪ್ಪನ್ನ ಕರದು ಮಾತಾಡಿ ಆತನನ್ನೂ ಒಪ್ಪಸತೀನಿ. ಜನ ನನ್ನ ಲೆಕ್ಕಕ್ಕಿಲ್ಲ!’ ಎಂದು ಚೂರು ಆವೇಶದಿಂದಲೇ ಹೇಳಿದ.

‘ಇದೇ ಬಸವ ಹೇಳುವ ದಯೇ! ಶರಣು ಶರಣಾರ್ಥಿ.

ಆ ದಿನ ಶಿವಮಲ್ಲಯ್ಯ ತಾತ ದೊಡ್ಡ ಮನೆಯಲ್ಲೇ ಉಳಿದ. ರಾತ್ರಿ ಪ್ರಸಾದದ ಕೋಣೆಯಲ್ಲಿ ಶಿವಗೀತ ಮಗನ ಜತೆ ಮನೆಮಂದಿಗೆ ಊಟ ನೀಡುತ್ತ ಲವಲವಿಕೆಯಿಂದ ಇದ್ದಳು. ತಾತನಿಗೂ ಸಮಾಧಾನವಾಯ್ತು. ಅಲ್ಲಿಂದ ತಾತ ಎದ್ದಾಗ ಶಿವಗೀತ ಪಾದಕ್ಕೆ ಹಣೆ ಹಚ್ಚಿ ಸಣಮಾಡಿದಳು. ‘ಶರಣು ಬಸವ. ಎಲ್ಲ ಒಳಿತಾಗತದ ಮಗ್ಳೆ’ ಎಂದು ಹಾರೈಸಿದ.

3

ಶಿವಗೀತ ಮಗನೊಂದಿಗೆ ತನ್ನ ದೊಡ್ಡ ಕೊಠಡಿಯಲ್ಲಿ ಮಲಗಿದ್ದಳು. ನಾಲ್ಕು ವರ್ಷದ ಮಗ ಶಿವದರ್ಶನ ಹಗಲೆಲ್ಲ ಮನೆಮಂದಿ ಜತೆ ಓಡಾಡಿ, ಆಟವಾಡಿ ದಣಿದು ಮಲಗಿದ್ದ. ಮನೆ ಕೆಲಸದಾಕೆ ಬಂದು ಮಣ್ಣಿನ ಪ್ರಣತಿಗೆ ಎಣ್ಣೆ ಹಾಕಿ, ಕುಡಿ ತೆಗೆದು, ಉರಿಯನ್ನು ನಿಚ್ಚಲಗೊಳಿಸಿ ಹೋಗಿದ್ದಳು. ಮಗ ಮಂಚದ ಮ್ಯಾಲೆ ಮಲಗಿದ್ದ. ತಾನು ಕೆಳಗೆ ಚಾಪೆ ಮ್ಯಾಲೆ ಕುಂತು, ಮಗನಿಗೆ ಚೋಬಡಿಯುತ್ತ ಶಿವಮಲ್ಲಯ್ಯ ತಾತ ಆಡಿದ ಮಾತುಗಳನ್ನು ನೆನಸಿಕೊಳ್ಳುತ್ತಿದ್ದಳು. ಮೈ ಮನಸ್ಸಲ್ಲಿ ಸ್ವಲ್ಪ ಖುಷಿ, ಸ್ವಲ್ಪ ಸಂಕಟವಾಗುತ್ತಿತ್ತು. ಆದೀಶ ಆತನ ಬಸವಪುರದ ಮನ್ಯಾಗ ತನ್ನನ್ನು ನೋಡುತ್ತ ನೋಡುತ್ತ ಕೊನೆಗೆ ಮಾತನಾಡಿಸುವ ನೆಪದಲ್ಲಿ ‘ನೀನು ಒಪ್ಪಿದ್ರೆ ನಾನು ನಿನ್ನ ಮದುವೆ ಆಗ್ತೀನಿ’ ಅಂದು ಸರಿದು ಹೋಗಿದ್ದ. ಅಂದಿನಿಂದ ಖುಷಿ, ಸಂಕಟ ಕಲೆತು ಕಾಡುತ್ತಿದ್ದವು. ನಂದೀಶ್ವರನ ಜಾತ್ರೆಗೆ ಬಂದಾಗಲೂ ಸಮಯ ನೋಡಿ ‘ನಿನ್ನ ಒಪ್ಪಿಗೆಯನ್ನು ನೀನು ತಿಳಿಸಲಿಲ್ಲ’ ಎಂದು ಹೇಳಿ ಕಣ್ಮರೆಯಾಗಿದ್ದ. ತನ್ನ ಕಥೆ ಆತನಿಗೆ ಗೊತ್ತಿತ್ತು. ಶಿವಗೀತಳ ಗಂಡ ಮರುಳಶಂಕರ ಕಲ್ಯಾಣಪುರ, ಬಸವಪುರದ ನಡುವೆ ಹರಿಯುವ ನದಿಯಲ್ಲಿ ಮುಳುಗಿ ಶವವಾಗಿ ಹರಿದು ಹೋದದ್ದನ್ನು ನೆನೆದಳು. ದುಃಖ ಒತ್ತಿ ಬಂದು ದುಕ್ಕಿಸಿ ಅತ್ತಳು...! ಪ್ರತಿವರ್ಷ ಶ್ರಾವಣಮಾಸದಲ್ಲಿ ಸುತ್ತಲೂರಿನ ಯುವಕರು ಈಜಿ ನದಿ ದಾಟುವ ಪಂಥ ಕಟ್ಟುವುದು, ಈಜುವುದು ರೂಢಿಯಾಗಿತ್ತು. ಎರಡು ವರ್ಷ ಮರುಳಶಂಕರ ಈಜಿ ಗೆದ್ದಿದ್ದ. ಮೂರನೆ ವರ್ಷನೂ ಇನ್ನೂ ಹುಮ್ಮಸ್ಸಿನಿಂದ ಪಂಥ ಗೆಲ್ಲಲು ಹೋದ. ಹತ್ತಾರು ಯುವಕರು ಸೇರಿದ್ದರು. ನದಿಗೆ ಇಳಿದರು. ಆ ವರ್ಷ ನದಿ ಹರಿವು ಇಳಿದಿರಲಿಲ್ಲವೋ, ಒಳಹರಿವು ಹೆಚ್ಚಿತ್ತೋ ಮುಂದಿದ್ದ ಮರುಳಶಂಕರ ಆ ದಡ ಸೇರಲಿಲ್ಲ! ಕೆಲವರು ಅಪಾಯ ಕಂಡು ಮರಳಿದರು. ಮರುಳಶಂಕರನ ಜತೆ ಇನ್ನೊಬ್ಬ ಯುವಕನೂ ನೀರು ಪಾಲಾದ. ಶವಗಳೂ ಸಿಗಲಿಲ್ಲ. ಗುರುತಿಗಾಗಿ ಗಂಡನ ಸಮಾಧಿಯೂ ಇರಲಿಲ್ಲ... ಈಗ ನಾಲ್ಕು ವರ್ಷಗಳಾದವು ಗಂಡನ ಸಾವು ಸಂಕಟವಿಲ್ಲದೆ ನೆನಪಾಗಿ ಮಾತ್ರ ಉಳಿದಿತ್ತು. ಆ ಜಾಗಕ್ಕೆ ಆದೀಶ ಸ್ವಯಿಚ್ಛೆಯಿಂದ ಬರಲು ಸಿದ್ಧನಾದದ್ದು ಕಂಡು ಮಾತುಗಳೇ ಬರದಾಗಿದ್ದವು. ಆದೀಶನೇನೋ ತನ್ನನ್ನು ನೋಡಿ ಮೆಚ್ಚಿರಬಹುದು. ಅದನ್ನು ಮುರಿಯಲು ಎಷ್ಟು ಕೈಗಳು ಬಲಗೊಂಡಿದ್ದಾವೆಂದು ಶಿವಗೀತಳಿಗೆ ಭಯವಾಗುತ್ತಿತ್ತು. ಆ ಕಲ್ಯಾಣದ ಬಸವಣ್ಣನೇ ಈ ಕಲ್ಯಾಣದ ಬಸವಣ್ಣನಾಗಿ ಶಿವಮಲ್ಲಯ್ಯ ತಾತ ಹುಟ್ಟಿ



